# KARNATAK UNIVERSITY, DHARWAD
# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**Examination G.A.D. Section**
**ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ**

**"NAAC Accredited with "A" Grade 2022"**

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215267
Website : www.kud.ac.in


ನಂ:/ಕವಿವಿ/ಪರೀಕ್ಷಾ/ಜಿಎಡಿ/2023/467 ದಿನಾಂಕ:01/08/2023

## ಸುತ್ತೋಲೆ

ವಿಷಯ: ಸ್ನಾತಕ ಪದವಿಯ ಎನ್.ಇ.ಪಿ 2 ಮತ್ತು 4 ನೇ ಸೆಮಿಸ್ಟರ್ ಕೋರ್ಸುಗಳ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ/ಶುಲ್ಕ ಭರಿಸುವ ಕುರಿತು.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ್ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೆನೆಂದರೆ, ಸ್ನಾತಕ ಪದವಿಯ ಎನ್.ಇ.ಪಿ 2 ಮತ್ತು 4 ನೇ ಸೆಮಿಸ್ಟರ್ ಕೋರ್ಸುಗಳ ವಿದ್ಯಾರ್ಥಿಗಳಿಗೆ ಬ್ಯಾಕ್‌ಲಾಗ್ ಪೇಪರ್ಸ್‌ಗಳ ಪರೀಕ್ಷಾ ಫಾರ್ಮ ತುಂಬುವ ಕುರಿತು ಕೆಲವು ನ್ಯೂನ್ಯತೆಗಳ ಬಗ್ಗೆ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ. ಅದರಂತೆ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಫಾರ್ಮ/ಶುಲ್ಕವನ್ನು ಆಫಲೈನ್ ಮುಖಾಂತರ ಭರಿಸಲು ಸೂಚಿಸಲಾಗಿದೆ.

1) ರಿಪೀಟರ್ಸ್ ವಿದ್ಯಾರ್ಥಿಗಳು 2 ನೇ ಸೆಮಿಸ್ಟರ್ ನಲ್ಲಿ ಬ್ಯಾಕ್‌ಲಾಗ್ ಪೇಪರ್ ಹೊಂದಿದ್ದರೆ ವಿದ್ಯಾರ್ಥಿಯು 3ನೇ ಸೆಮಿಸ್ಟರ್‌ಗೆ ಪರೀಕ್ಷಾ ಅರ್ಜಿ ತುಂಬಿರುವುದಿಲ್ಲ. ಅಂತಹ ವಿದ್ಯಾರ್ಥಿಗಳಿಂದ ಆಫ್ ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು ಭರಿಸಿ ಆನ್‌ಲೈನ್ ಮುಖಾಂತರ ಪರೀಕ್ಷಾ ಶುಲ್ಕ ಭರಿಸಿ ಪ್ರತ್ಯೇಕವಾಗಿ ಪರೀಕ್ಷಾ ವಿಭಾಗದ ಸಂಬಂಧಪಟ್ಟ ಅಧೀಕ್ಷರುಗಳಿಗೆ ಯಾದಿಯನ್ನು ಸಲ್ಲಿಸುವುದು.

2) ವಿದ್ಯಾರ್ಥಿಯು ಸನ್ 2021-22ನೇ ಸಾಲಿನಲ್ಲಿ ಪ್ರವೇಶ ಪಡೆದು 1 ನೇ ಸೆಮಿಸ್ಟರ್ ಪೂರ್ಣಗೊಳಿಸಿ 2021-22ನೇ ಸಾಲಿನಲ್ಲಿ 2 ನೇ ಸೆಮಿಸ್ಟರ್ ಸ್ಥಗಿತಗೊಳಿಸಿ ಪುನ: 2022-23 ನೇ ಸಾಲಿನಲ್ಲಿ ಪ್ರವೇಶ ಪಡೆದು 1 ನೇ ಸೆಮಿಸ್ಟರ್ ದಿಂದ 2 ನೇ ಸೆಮಿಸ್ಟರ್‌ಗೆ ಬಡ್ತಿ ಹೊಂದಲು ಸಾಧ್ಯವಾಗದೆ ಇರುವಂತಹ ವಿದ್ಯಾರ್ಥಿಗಳಿಂದ ಆಫ್ ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು ಭರಿಸಿ ಆನ್‌ಲೈನ್ ಮುಖಾಂತರ ಪರೀಕ್ಷಾ ಶುಲ್ಕ ಭರಿಸಿ ಪ್ರತ್ಯೇಕವಾಗಿ ಪರೀಕ್ಷಾ ವಿಭಾಗದ ಸಂಬಂಧಪಟ್ಟ ಅಧೀಕ್ಷರುಗಳಿಗೆ ಯಾದಿಯನ್ನು ಸಲ್ಲಿಸುವುದು.

3) 2 ಮತ್ತು 4 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು ಪರೀಕ್ಷಾ ಫಾರ್ಮ/ಶುಲ್ಕವನ್ನು ತುಂಬುವಾಗ ನಜರಚೂಕಿನಿಂದ 2 ನೇ ಸೆಮಿಸ್ಟರ್‌ನ ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳು 2 ನೇ ಸೆಮಿಸ್ಟರ್ ಬ್ಯಾಕಲಾಗ್ ಪೇಪರ್ಸ್‌ಗಳನ್ನು ಹಾಗೂ 4 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು ಕೇವಲ 2 ನೇ ಸೆಮಿಸ್ಟರ್ ಬ್ಯಾಕಲಾಗ್ ಪೇಪರ್ಸ್‌ಗಳ ಪರೀಕ್ಷಾ ಶುಲ್ಕ ಭರಿಸಿ 4 ನೇ ಸೆಮಿಸ್ಟರ್‌ನ ಪರೀಕ್ಷಾ ಫಾರ್ಮಗಳನ್ನು ತುಂಬಿರುವುದಿಲ್ಲ. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಫಾರ್ಮ/ಶುಲ್ಕವನ್ನು SBI Online ಮುಖಾಂತರ ಭರಿಸಲು ತಿಳಿಸಲಾಗಿದೆ. ಮುಂದುವರೆದು, ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಾಗ ಪ್ರತಿಯೊಂದು ವಿದ್ಯಾರ್ಥಿಯ UUCMS Registration No, Subject, Subject Code, ಈ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿದೆ.

4) ಈಗಾಗಲೇ ಹೊರಡಿಸಿದ ತಿದ್ದುಪಡಿ ಅಧಿಸೂಚನೆಯನ್ವಯ ಕ್ರಮ ಜರುಗಿಸಲು ಸೂಚಿಸಲಾಗಿದೆ.

ಕುಲಸಚಿವರು(ಮೌಲ್ಯಮಾಪನ)

ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:

1. ಕ.ವಿ.ವಿ.ವ್ಯಾಪ್ತಿಯಲ್ಲಿ ಬರುವ ಎಲ್ಲ ಆಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರರುಗಳಿಗೆ.
2. ಹಣಕಾಸು ಅಧಿಕಾರಿಗಳು, ಕ.ವಿ.ವಿ.ಧಾರವಾಡ.
3. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ/ಎಸ್.ಸಿ/ಎಸ್.ಟಿ/ಕೆ-1/ಓ.ಬಿ.ಸಿ.ಘಟಕ ಕ.ವಿ.ವಿ.ಧಾರವಾಡ.